ಪ್ರಜಾವಾಣಿ 3
ಶುಕ್ರವಾರ • ಮೇ 12, 2023

# ಎಟಿಎಂಇ: ವಿದ್ಯಾರ್ಥಿಗಳಿಗೆ ಅಣಕು ಸಿಇಟಿ 17ಕ್ಕೆ

ಪ್ರಜಾವಾಣಿ ವಾರ್ತೆ

**ಮೈಸೂರು:** ನಗರದ ಎಟಿಎಂಇ ಎಂಜಿನಿಯರಿಂಗ್ ಕಾಲೇಜಿನಿಂದ ದ್ವಿತೀಯ ಪಿಯು ಉತ್ತೀರ್ಣಗೊಂಡ ವಿಜ್ಞಾನ ವಿದ್ಯಾರ್ಥಿಗಳಿಗೆ ಮೇ 17ರಂದು ಅಣಕು ಸಾಮಾನ್ಯ ಪ್ರವೇಶ ಪರೀಕ್ಷೆ (ಸಿಇಟಿ) ಆಯೋಜಿಸಲಾಗಿದೆ.

ಗುರುವಾರ ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಪ್ರಾಂಶುಪಾಲ ಡಾ.ಎಲ್. ಬಸವರಾಜ್, 'ಸಿಇಟಿ ಮಾದರಿಯಲ್ಲಿ ಪ್ರಶ್ನೆಪತ್ರಿಕೆ ನೀಡಲಾಗುವುದು. ಬೆಳಿಗ್ಗೆ 10.40ರಿಂದ 12ರವರೆಗೆ ಗಣಿತ, 1.30ರಿಂದ 2.50ರವರೆಗೆ ಭೌತಶಾಸ್ತ್ರ, 3.30ರಿಂದ 4.50ರವರೆಗೆ ರಸಾಯನ ಶಾಸ್ತ್ರ ಪರೀಕ್ಷೆ ನಡೆಯಲಿದೆ' ಎಂದರು.

'ಆಸಕ್ತರು www.atme.in ವೆಬ್‌ಸೈಟ್ ಮೂಲಕ ಅಥವಾ ಮೊ.ಸಂ.99022 38768 ಸಂಪರ್ಕಿಸಿ, ಮೇ 14ರ ಸಂಜೆಯೊಳಗೆ ನೋಂದಣಿ ಮಾಡಿಸಬಹುದು' ಎಂದರು.

ಸುದ್ದಿಗೋಷ್ಠಿಯಲ್ಲಿ ಡೀನ್ ಡಾ.ಯತೀಶ್, ಸಹ ಪ್ರಾಧ್ಯಾಪಕ ಎಸ್. ರವಿಕುಮಾರ್ ಇದ್ದರು.